# <u>ಕಾರ್ಮಿಕ ನ್ಯಾಯಾಲಯ, ಮೈಸೂರು.</u>

**Ref**: 8/2025

ಡಬ್ಲ್ಯೂ.ಡಬ್ಲ್ಯೂ-1

**<u>ದಿನಾಂಕ 23.10.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು</u>**

**ಪಾಟೀ ಸವಾಲುಃ 2 ನೇ ಪಕ್ಷಗಾರರ ಸಂಖ್ಯೆ-1 ರವರ ಪರ ಶ್ರೀ.ಡಿ.ಎಸ್.ಎಸ್. ವಕೀಲರಿಂದಃ**

ನಾನು ಎಸ್.ಎಸ್.ಎಲ್.ಸಿ. ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. 2 ನೇ ಪಕ್ಷಗಾರರ ಸಂಖ್ಯೆ-1 ರವರ ಸಂಸ್ಥೆ software ಸಂಸ್ಥೆ ಆಗಿರುತ್ತದೆ. ಅದೇ ರೀತಿ 2 ನೇ ಪಕ್ಷಗಾರರ ಸಂಖ್ಯೆ-2 ರವರು ಭದ್ರತಾ ಸಿಬ್ಬಂದಿ ರವರನ್ನು ಪುರೈಸುರ ಸಂಸ್ಥೆ ಎಂದರೆ ಸರಿ. ನನಗೆ ನೀಡಿದ್ದ 2 ಗುರುತಿನ ಚೀಟಿಗಳನ್ನು ಅವುಗಳು ನಿ.ಡಬ್ಲ್ಯೂ-1 ಮತ್ತು 2 ಆಗಿದ್ದು ಸದರಿ ದಾಖಲೆಗಳನ್ನು ನಾನು ಸಂಸ್ಥೆ ಒಳಗೆ ಹೋಗಲು ಉಪಯೋಗ ಮಾಡುತ್ತಿದ್ದೆ ಎಂದರೆ ಸರಿ. ನಿ.ಡಬ್ಲ್ಯೂ-1 ರ ಗುರುತಿನ ಚೀಟಿಯನ್ನು ಎಸ್.ಮ್ಯಕ್ ಸಂಸ್ಥೆಯವರು ನೀಡಿರುವ ದಾಖಲೆ ಎಂದರೆ ಸರಿ. ನಿ.ಡಬ್ಲ್ಯೂ-1 ರ ದಾಖಲೆಯಲ್ಲಿ ನನ್ನ ಹುದ್ದೆ Nonex–Lady guard ಎಂದು ನಮೂದು ಇರುತ್ತದೆ. ಸದರಿ ದಾಖಲೆಯಲ್ಲಿ Employ No.34894 ಎಂದು ಬರೆದಿರುತ್ತದೆ. ನಿ.ಡಬ್ಲ್ಯೂ-2 ರ ದಾಖಲೆಯಲ್ಲಿ ಅವರ ಮಾಲೀಕರ ಹೆಸರು Unique delta force security private limited ಎಂದು ಹೇಳಿರುತ್ತಾರೆ ಎಂದರೆ ಸರಿ.

ನಾನು ಎಸ್.ಮ್ಯಕ್ ಸಂಸ್ಥೆಯಲ್ಲಿ 30.09.2005 ರಿಂದ ಅಕ್ಟೋಬರ್ 2023 ರವರೆಗೆ ಕೆಲಸ ಮಾಡಿರುತ್ತೇನೆ. ನಾನು 2 ನೇ ಪಕ್ಷಗಾರರ ಸಂಖ್ಯೆ-2 ರವರ ಸಂಸ್ಥೆಯಲ್ಲಿ 14.11.2023 ರಿಂದ 18.04.2024 ಕೆಲಸ ಮಾಡಿರುತ್ತೇನೆ. ಈ ಪ್ರಕರಣದಲ್ಲಿ ಎಸ್.ಮ್ಯಕ್ ಸಂಸ್ಥೆಯನ್ನು ಪಕ್ಷಗಾರರನ್ನಾಗಿ ಸೇರಿಸಿಲ್ಲ. ಅವರನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಸೇರಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ. 2 ನೇ ಪಕ್ಷಗಾರರ ಸಂಖ್ಯೆ-1 ರವರ ಕ್ಯಾಂಪಸ್ ನಲ್ಲಿ ಕೆಲಸ ಮಾಡುವಾಗ ಅವರ ಗುರುತಿನ ಚೀಟಿ ನನಗೆ ಕೊಟ್ಟಿಲ್ಲ.

2 ನೇ ಪಕ್ಷಗಾರರ ಸಂಖ್ಯೆ-1 ರವರ ನನಗೆ ನೇರ ಸಂಬಳವನ್ನು ಕೊಟ್ಟು infosys ಉದ್ಯೋಗಿ ಎಂದು ಗುರುತಿಸುವ ಉದ್ಯೋಗಿ ಸಂಖ್ಯೆ ನೀಡಿಲ್ಲ. ನಿ.ಡಬ್ಲ್ಯೂ-10 ರ ಪ್ರಕಾರ ನಾನು ಇ.ಪಿ.ಎಫ್ ಪಾಸ್ ಪುಸ್ತಕವನ್ನು ಹಾಜರು ಪಡಿಸಿದ್ದು, ಅದರಲ್ಲಿ Unique delta force security private limited ಮತ್ತು ಎಸ್.ಮ್ಯಕ್ security services private limited ಇಬ್ಬರನ್ನು ಮಾತ್ರ ತೋರಿಸಿರುತ್ತಾರೆ ಎಂದರೆ ಸರಿ. ನಿ.ಡಬ್ಲ್ಯೂ-16 ಮತ್ತು 17 ಬ್ಯಾಂಕ್ statement ಪ್ರಕಾರ ನನ್ನ ಮಾಸಿಕ ಸಂಬಳವನ್ನು Unique delta force security private limited ಮತ್ತು ಎಸ್.ಮ್ಯಕ್ security services private limited ರವರು ಮಾತ್ರ ಸಂಬಳವನ್ನು ಜಮೆ ಮಾಡಿರುತ್ತಾರೆ ಎಂದರೆ ಸರಿ. 2 ನೇ ಪಕ್ಷಗಾರರ ಸಂಖ್ಯೆ-1 ರವರು ನನ್ನ ಖಾತೆಗೆ ಹಣ ಜಮೆ ಮಾಡಿರುವ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ ಎಂದರೆ ಸರಿ.

ನನ್ನ ಪ್ರಮಾಣ ಪತ್ರದ ಖಂಡಿಕೆ 3 ರಲ್ಲಿ 2 ನೇ ಪಕ್ಷಗಾರರ ಸಂಖ್ಯೆ-1 ರವರು 2 ನೇ ಪಕ್ಷಗಾರರ ಸಂಖ್ಯೆ-2 ರವರಿಗೆ ನನ್ನನ್ನು ಕೆಲಸಕ್ಕೆ ಸೇರಿಸಿಕೊಳ್ಳಬೇಡಿ ಎಂಬ ನಿರ್ಧೇಶನ ನೀಡಿರುತ್ತಾರೆ ಎಂದು ತಿಳಿಸಿದ್ದು ಆ ಬಗ್ಗೆ ದಾಖಲೆ ಹಾಜರು ಪಡಿಸಿರುತ್ತೀರಾ ಎಂದರೆ ಸಾಕ್ಷಿ ಸಿ.ಡಿ. ಮತ್ತು ಅರ್ಜಿ ದಾಖಲೆಯನ್ನು ಹಾಜರು ಪಡಿಸಿರುತ್ತೇನೆ ಎನ್ನುತ್ತಾರೆ. ವಸಂತರೈ ರವರು 2 ನೇ ಪಕ್ಷಗಾರರ ಸಂಖ್ಯೆ-1 ರವರ ಉದ್ಯೋಗಿ ಆಗಿರುತ್ತಾರೆ ಎಂದರೆ ಸರಿಯಲ್ಲ. ನಾನು ಪ್ರಮಾಣ ಪತ್ರದಲ್ಲಿ ಹೇಳಿರುವಂತೆ 2 ನೇ ಪಕ್ಷಗಾರರ ಸಂಖ್ಯೆ-1 ರವರು 2 ನೇ ಪಕ್ಷಗಾರರ ಸಂಖ್ಯೆ-2 ರವರಿಗೆ ಯಾವುದೇ ನಿರ್ಧೇಶನವನ್ನು ನೀಡಿಲ್ಲ ಎಂದರೆ ಸಾಕ್ಷಿ ನನ್ನ ಮುಂದೆ ಏನು ಹೇಳಿಲ್ಲ ಎನ್ನುತ್ತಾರೆ.

ನಾನು 2 ನೇ ಪಕ್ಷಗಾರರ ಸಂಖ್ಯೆ-1 ರವರ ಉದ್ಯೋಗಿಯಾಗಿರುವುದರಿಂದ ನಾನು ಕೇಳಿರು ಪರಿಹಾರವು 2 ನೇ ಪಕ್ಷಗಾರರ ಸಂಖ್ಯೆ-2 ರವರಿಗೆ ಬಂಧನಕಾರಿ ಆಗಿರುವುದಿಲ್ಲ ಎಂದರೆ

ಸರಿಯಲ್ಲ.  2 ನೇ ಪಕ್ಷಗಾರರ ಸಂಖ್ಯೆ-1 ರವರು ನನಗೆ ಯಾವುದೇ ಪರಿಹಾರವನ್ನು ಕೊಡಲು ಅರ್ಹರಲ್ಲ ಎಂದರೆ ಸರಿಯಲ್ಲ. ನನ್ನನ್ನು ವಜಾಗೊಳಿಸಲು ಹಾಗೂ ನನ್ನನ್ನು ವರ್ಗಾವಣೆ ಮಾಡುವ ಅಧಿಕಾರ 2 ನೇ ಪಕ್ಷಗಾರರ ಸಂಖ್ಯೆ-2 ರವರಿಗೆ ಮಾತ್ರ ಇರುತ್ತದೆ ಎಂದರೆ ಸಾಕ್ಷಿ ಇಬ್ಬರಿಗೂ ಸಂಬಂಧ ಪಡುತ್ತದೆ ಎನ್ನುತ್ತಾರೆ. 2 ನೇ ಪಕ್ಷಗಾರರ ಸಂಖ್ಯೆ-2 ರವರು ನನಗೆ ಯಾವುದೇ ಆಫರ್ ಲೆಟರ್ ಕೊಟ್ಟಿಲ್ಲ ಎಸ್.ಮ್ಯಕ್ service private limited ಹಾಗೂ 2 ನೇ ಪಕ್ಷಗಾರರ ಸಂಖ್ಯೆ-2 ರವರು ನನಗೆ ಆಫರ್ ಲೆಟರ್ ಕೊಟ್ಟಿರುತ್ತಾರೆ ಎಂದರೆ ಸರಿ.

ನಾನು 2 ನೇ ಪಕ್ಷಗಾರರ ಸಂಖ್ಯೆ-1 ರವರ ಉದ್ಯೋಗಿ ಅಲ್ಲದೆ ಇರುವ ಕಾರಣ ನನಗೆ ಅವರು ಯಾವುದೇ ಸಂಬಳವನ್ನು ಕೊಟ್ಟಿಲ್ಲ, ಶಾಸನಬದ್ಧ ವಂತಿಕೆಗಳನ್ನು ಎಂದೂ ಪಾವತಿಸಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು 2 ನೇ ಪಕ್ಷಗಾರರ ಸಂಖ್ಯೆ-1 ರವರ ನಡುವೆ ಯಾವುದೇ ಮಾಲೀಕ ನೌಕರರ ಸಂಬಂಧ ಇಲ್ಲ ಎಂದರೆ ಸರಿಯಲ್ಲ. 2 ನೇ ಪಕ್ಷಗಾರರ ಸಂಖ್ಯೆ-1 ರವರು 2 ನೇ ಪಕ್ಷಗಾರರ ಸಂಖ್ಯೆ-2 ರವರ ಗ್ರಾಹಕರಾಗಿರುತ್ತಾರೆ ಎಂದರೆ ಸರಿಯಲ್ಲ. ನಾನು ಯೂ.ಡಿ.ಎಫ್. ಉದ್ಯೋಗಿ ಆಗಿ 2 ನೇ ಪಕ್ಷಗಾರರ ಸಂಖ್ಯೆ-1 ರವರ ಆವರ್ಣದಲ್ಲಿ ನನ್ನ ಕರ್ತವ್ಯವನ್ನು ನಿರ್ವಹಿಸುತ್ತಿದ್ದೆ ಎಂಬ ಒಂದೇ ಕಾರಣಕ್ಕಾಗಿ ಅವರ ಮೇಲೆ ತಪ್ಪಾಗಿ ಪ್ರಕರಣವನ್ನು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ 2 ನೇ ಪಕ್ಷಗಾರರ ಸಂಖ್ಯೆ-1 ರವರ ವಿರುದ್ಧ ನಾನು ಕೇಳಿರುವ ಪರಿಹಾರಗಳನ್ನು ಪಡೆಯಲು ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ 2 ನೇ ಪಕ್ಷಗಾರರ ಸಂಖ್ಯೆ-1 ರವರ ವಿರುದ್ಧ ನನ್ನ ಪ್ರಕರಣ ವಜಾಗೊಳಿಸಬೇಕಾಗುತ್ತದೆ ಎಂದರೆ ಸರಿಯಲ್ಲ.

**2 ನೇ ಪಕ್ಷಗಾರರ ಸಂಖ್ಯೆ-2 ರವರ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ, ಸಮಯ ನೀಡಲಾಯಿತು.**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಿದೆ.)
(ಮೇಲಿನ ಸಾಕ್ಷ್ಯವನ್ನು  ಸಾಕ್ಷಿಗೆ ಓದಿ, ತಿಳಿಸಿ, ಹೇಳಿದಾಗ, ಅವರು ಅದು ಸರಿ ಇದೆ ಎಂದು ಒಪ್ಪಿದ್ದಾರೆ.)

**ಅಧ್ಯಕ್ಷಾಧಿಕಾರಿಗಳು,**
**ಕಾರ್ಮಿಕ ನ್ಯಾಯಾಲಯ, ಮೈಸೂರು**